ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಗುರುವಾರ ೨೪ನೇ ಮಾರ್ಚ್ ೧೯೯೪, ಚೈತ್ರ ೧೦, ಶಕ ೧೯೧೫

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಗ್ಗೆ ೧೧.೨೫ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ವಿ.ಎಸ್. ಕೌಜಲಗಿ) ಅವರು ಪೀಠವನ್ನು ಅಲಂಕರಿಸಿದ್ದರು.

ಸಂತಾಪ ಸೂಚನೆಗಳು

ಅಧ್ಯಕ್ಷರು : ವಿಧಾನ ಸಭೆಯ ಮಾಜಿ ಸದಸ್ಯರುಗಳಾದ ಶ್ರೀ ಗೌಸ್ ಮೊಹಿಯುದ್ದೀನ್ ಹಾಗೂ ಶ್ರೀ ನಜೀರ್ ಅಹಮದ್ ಸಿದ್ದಿಕಿ, ಇವರುಗಳ ನಿಧನರಾದುದನ್ನು ಈ ಸದನಕ್ಕೆ ವಿಷಾದದಿಂದ ತಿಳಿಸುತ್ತಿದ್ದೇನೆ.

1. ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ಗೌಸ್ ಮೊಹಿಯುದ್ದೀನ್ ಅವರು ದಿನಾಂಕ 22-3-1994ರಂದು ನಿಧನರಾದರು.

ಶ್ರೀಯುತರು ಮೂರನೇ ವಿಧಾನ ಸಭೆಗೆ ರಾಯಚೂರು ಕ್ಷೇತ್ರದಿಂದ ಚುನಾಯಿತರಾಗಿದ್ದರು. ಶಿಕ್ಷಕರಾಗಿ, ವಕೀಲರಾಗಿ, ರಾಯಚೂರು ಪಟ್ಟಣದ ಮುನ್ಸಿಪಲ್ ಕೌನ್ಸಿಲರಾಗಿ ಹಾಗೂ ರಾಯಚೂರು ಬಾರ್ ಅಸೋಷಿಯೇಷನ್ನಿನ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿರುತ್ತಾರೆ.

ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ನಜೀರ್ ಅಹಮದ್ ಸಿದ್ದಿಕಿ ಅವರು ದಿನಾಂಕ 24-3-1994ರಂದು ನಿಧನರಾದರು.

ಶ್ರೀಯುತರು ಐದನೇ ಹಾಗೂ ಆರನೇ ವಿಧಾನ ಸಭೆಯ ಸದಸ್ಯರಾಗಿದ್ದರು. ಶ್ರೀಯುತರು ಶ್ರೀ ದೇವರಾಜ ಅರಸು ಮಂತ್ರಿಮಂಡಲದಲ್ಲಿ ವಕ್ಫ್ ಖಾತೆಯ ರಾಜ್ಯ ಮಂತ್ರಿಗಳಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರ ಸ್ಮರಣಾರ್ಥ ಮಾನ್ಯ ಸದಸ್ಯರುಗಳು ಒಂದು ನಿಮಿಷ ಎದ್ದು ನಿಂತು ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಸದನವು ಎದ್ದು ನಿಂತು ಮೃತರ ಗೌರವಾರ್ಥ ಒಂದು ನಿಮಿಷ ಮೌನವನ್ನಾಚರಿಸಿತು.)

ಅಧ್ಯಕ್ಷರು : ಈ ಸಭೆ ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯವನ ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೇ, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯತ್ ಚುನಾವಣೆಗಳನ್ನು ಮುಂದಕ್ಕೆ ಹಾಕಿರುವ ಬಗ್ಗೆ ಪತ್ರಿಕೆಯಲ್ಲಿ ಬಂದಿದೆ. ಈ ಸದನ ನಡೆಯುತ್ತಿರುವಾಗ ಈ ಸದನಕ್ಕೆ ತಿಳಿಸದೇ ಈ ಸಭೆಯ ಹಕ್ಕುಚ್ಯುತಿಯಾಗಿದೆ.....

(ಮುಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟೀಕರಣ ನೀಡಬೇಕು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇದು ಆಗಬಾರದು. ಪ್ರಜಾಪ್ರಭುತ್ವ ವ್ಯವಸ್ಥೆಯ ಕೊಲೆ ಆಗಿದೆ....

ಜನತಾದಳ ಸದಸ್ಯರಿಂದ ಧರಣಿ

(ಈ ಹಂತದಲ್ಲಿ ಜನತಾ ದಳದ ಸದಸ್ಯರು ಬಾವಿಯಲ್ಲಿ ಧರಣಿ ಮಾಡತೊಡಗಿದ್ದರು.)

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೇ, ಇದು ಶಾಸನ ಸಭೆಗೆ ಮಾಡಿದಂತಹ ಅಗೌರವ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಶಾಸನ ಸಭೆ ನಡೆಯುತ್ತಿರುವಾಗ ಅಲ್ಲಿ ಚರ್ಚೆ ಮಾಡದೇ ಚುನಾವಣೆಯನ್ನು ಮುಂದಕ್ಕೆ ಹಾಕಿರುವುದು ಪ್ರಜಾತಂತ್ರದ ಕೊಲೆ ಆಗಿದೆ. ಪ್ರಜಾಪ್ರಭುತ್ವದ ಕೊಲೆ ಆಗಿದೆ. ಈ ಸದನವನ್ನು ಸರ್ಕಾರ ಕಡೆಗಣಿಸಿದೆ. ಈ ಸರ್ಕಾರದ ನೀತಿಯನ್ನು ವಿರೋಧಿಸಿ, ನಾನು ಚುನಾವಣೆಯನ್ನು ಮುಂದಕ್ಕೆ ಹಾಕಿರುವ ನೀತಿಯನ್ನು ವಿರೋಧಿಸಿ ಸಭಾತ್ಯಾಗ ಮಾಡುತ್ತೇನೆ.

(ಶ್ರೀ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಡಾ॥ ಜೀವರಾಜ ಆಳ್ವ: ಮಾನ್ಯ ಅಧ್ಯಕ್ಷರೇ, ಚುನಾವಣೆಯನ್ನು ಮುಂದೂಡಿರುವುದು ರಾಜ್ಯ ಚುನಾವಣೆ ಆಯೋಗ. ಅವರು ಏನು ತೀರ್ಮಾನ ತೆಗೆದುಕೊಂಡಿದ್ದಾರೆ ಎಂದರೆ, ಈ ರಾಜ್ಯದ ಡೈರೆಕ್ಟರ್ ಜನರಲ್ ಆಫ್ ಪೋಲೀಸ್‌ನವರು ಲಾ ಅಂಡ್ ಆರ್ಡರ್ ಸರಿಯಾಗಿಲ್ಲ ಎಂದು ಹೇಳಿದ್ದಾರೆ ಎನ್ನುವ ಕಾರಣದ ಮೇಲೆ ಮುಂದಕ್ಕೆ ಹಾಕಿದ್ದಾರೆ.....

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ಇವರು ಉದ್ದೇಶಪೂರ್ವಕವಾಗಿ ವಿವಾದ ಸೃಷ್ಟಿ ಮಾಡಿ ಚುನಾವಣೆ ನಡೆಯದಂತೆ ನೋಡಿಕೊಳ್ಳುವ ಸಂಚು. ಇದು. ಇದನ್ನು ಉದ್ದೇಶಪೂರ್ವಕವಾಗಿ ಮಾಡಿದ್ದಾರೆ. ಇದರಲ್ಲಿ ಜನತಾದಳದವರು ಶಾಮೀಲಾಗಿದ್ದಾರೆ. ಈ ಸದನ ನಡೆಯುತ್ತಿರಬೇಕಾದರೆ ತಾವು ಏತಕ್ಕೆ ಚುನಾವಣಾ ಆಯೋಗಕ್ಕೆ ಪತ್ರ ಬರೆದಿರಿ. ಈ ಮನೆಯನ್ನು ತಾವು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗಿತ್ತು. ಲಾ ಅಂಡ್ ಆರ್ಡರ್ ಕೆಟ್ಟಿದೆ ಎನ್ನುವುದನ್ನು ಮುಂದೆ ಮಾಡಿ ಚುನಾವಣೆ ಮುಂದಕ್ಕೆ ಹಾಕಿದಿರಿ. ಲಾ ಅಂಡ್ ಆರ್ಡರ್ ಕೆಟ್ಟಿದ್ದರೆ ಅದನ್ನು ನಿರ್ವಹಿಸಲಿಕ್ಕೆ ಆಗದೆ ಇರುವಂತಹ ಸಂದರ್ಭದಲ್ಲಿ ಮಾನ್ಯಮುಖ್ಯಮಂತ್ರಿಗಳು ರಾಜೀನಾಮೆ ಕೊಟ್ಟು ಹೋಗಿ. ಅಧಿಕಾರದ ವಿಕೇಂದ್ರೀಕರಣ ಮಾಡುತ್ತೇವೆಂದು ಸುಪ್ರೀಂ ಕೋರ್ಟಿನಲ್ಲಿ ಅಂಡರ್ ಟೇಕಿಂಗ್ ಕೊಟ್ಟು ಚುನಾವಣೆಯನ್ನು ನಡೆಸುತ್ತೇವೆಂದು ಹೇಳಿ ಚುನಾವಣೆ ಮುಂದಕ್ಕೆ ಹಾಕುವಂತಹ ಸಂಚುಮಾಡಿದ್ದೀರಿ. ಈ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಪತ್ರವನ್ನು ತಾವು ಚುನಾವಣೆ ಆಯೋಗಕ್ಕೆ ಬರೆದಿದ್ದೀರಿ. ಅದಕ್ಕೆ ವಿಶೇಷವಾದ ಕಾರಣ ಏನು ಇತ್ತು ಎಂದು ಮಾನ್ಯ ಮುಖ್ಯಮಂತ್ರಿಗಳು ತಿಳಿಸಬೇಕು. ತಾವು ಗೃಹ ಖಾತೆಯನ್ನು ಹೊಂದಿರುವುದರಿಂದ ಅಂಕಿಅಂಶಗಳನ್ನು ಸಭೆಯ ಮುಂದೆ ಇಡಿ.....

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿ ಚುನಾವಣೆಗಳನ್ನು ಮುಂದೂಡುವ ಬಗ್ಗೆ ಸದನದ ವಿಶ್ವಾಸವನ್ನು ತೆಗೆದುಕೊಳ್ಳದೆ....

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ: ವೀರೇಂದ್ರ ಪಾಟೀಲರ ಕಾಲದಲ್ಲಿ ಶಾಂತಿಯನ್ನು ಕಾಪಾಡುವುದಕ್ಕೆ ಆಗಲಿಲ್ಲ ರಾಜೀನಾಮೆ ಕೊಡಿ ಎಂದು ಹೇಳಿ ರಾಜೀನಾಮೆಯನ್ನು ಕೊಡಿಸಿದಿರಿ. ಇವತ್ತು ಇಡೀ ರಾಜ್ಯದಲ್ಲಿ ಶಾಂತಿ ಇಲ್ಲ ಆದ್ದರಿಂದ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಹೋಗುತ್ತಾರೇನು?

(ಗೊಂದಲ)

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಗಳು ಏನು ಉತ್ತರ ಕೊಡುತ್ತಾರೋ ಕೇಳೋಣ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ಇವತ್ತು ವಿರೋಧಪಕ್ಷವಾದ ಜನತಾದಳದವರು ನೈತಿಕ ಹಕ್ಕು ಕಳೆದುಕೊಂಡಿದ್ದಾರೆ. ಪೋಲೀಸ್ ಅಧಿಕಾರಿಗಳು ಸಹ ನೈತಿಕ ಹಕ್ಕು ಕಳೆದುಕೊಂಡಿದ್ದಾರೆ. ಪೋಲೀಸ್ ಅಧಿಕಾರಿಗಳು ಲಾ ಅಂಡ್ ಆರ್ಡರ್ ಕಂಟ್ರೋಲ್ ಮಾಡಲು ಆಗದೆ ನೈತಿಕ ಹಕ್ಕು ಕಳೆದುಕೊಂಡಿದ್ದಾರೆ. ಗೃಹ ಖಾತೆಯನ್ನು ಹೊಂದಿರುವ ಮುಖ್ಯಮಂತ್ರಿಗಳು ತಮ್ಮ ಸ್ಥಾನಕ್ಕೆ ಕೂಡಲೇ ರಾಜೀನಾಮೆಯನ್ನು ಕೊಟ್ಟು ಮನೆಗೆ ಹೋಗಲಿ. ಚುನಾವಣೆ ಆಯೋಗಕ್ಕೆ ಏನು ಪತ್ರ ಬರೆದಿದ್ದಾರೆ ಅದನ್ನು ಸದನಕ್ಕೆ ಹೇಳಬೇಕು, ಅದನ್ನು ಸದನದ ಮುಂದೆ ಇಡಬೇಕು, ಯಾವ ಕಾರಣಕ್ಕೋಸ್ಕರ ಪತ್ರ ಬರೆದಿದ್ದಾರೆ? ಇವರು ಏತಕ್ಕೆ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಲಿಲ್ಲ. ನಿಮಗೆ ಅಧಿಕಾರ ವಿಕೇಂದ್ರೀಕರಣದಲ್ಲಿ ವಿಶ್ವಾಸ ಇಲ್ಲವೆ.....

(ಧರಣಿ ಮಾಡುತ್ತಿದ್ದ ಸದಸ್ಯರು ನ್ಯಾಯಾಂಗ ತನಿಖೆ ಆಗಲೇಬೇಕು ಎಂದು ಘೋಷಣೆ ಕೂಗಿದರು)

(ಗೊಂದಲ)

ಅಧ್ಯಕ್ಷರು: ತಾವು ತಮ್ಮ ಸ್ಥಳಕ್ಕೆ ಹೋಗಿ ಮಾತನಾಡಿ ಯಡಿಯೂರಪ್ಪನವರೇ.

(ಈ ಹಂತದಲ್ಲಿ ಬಿ.ಜೆ.ಪಿ. ಸದಸ್ಯರು ಧರಣಿಯಲ್ಲಿ ಪಾಲ್ಗೊಂಡರು)

ಶ್ರೀ ಬಿ.ಎಸ್. ಯಡಿಯೂರಪ್ಪ: ಈ ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪಂಚಾಯತಿ ಚುನಾವಣೆಗಳು ನಡೆಯಬಾರದು ಎಂದು ಜನತಾ ದಳದ ಸದಸ್ಯರು ಈ ವಿವಾದವನ್ನು ಸೃಷ್ಟಿ ಮಾಡಿದರು. ಇದರಲ್ಲಿ ತಾವೂ ಸಹ ಶಾಮೀಲಾಗಿದ್ದೀರಿ.....

(ಗೊಂದಲ)

ಡಾ|| ಜೀವರಾಜ ಆಳ್ವ: ವಿಧಾನ ಸಭೆ ನಡೆಯುವಾಗ ಮೊನ್ನೆ ಬಜೆಟ್ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಒಂದು ದೇಶದಲ್ಲಿ ಆದಂತಹ ಐತಿಹಾಸಿಕ ನಿರ್ಣಯ; ಈ ಎಲೆಕ್ಷನ್ ಪ್ರೋಸೆಸ್ ಒಂದು ಹೆಜ್ಜೆ ಮುಂದುವರೆದಿದ್ದೇವೆ, ಎರಡನೇ ಹೆಜ್ಜೆ ನಡೆಯುತ್ತಾ ಇದೆ. we have scheduled the elections ಎಂದು ಹೇಳಿದ್ದಾರೆ. ಅಲ್ಲಿಗೆ ಮುಕ್ತಾಯವಾಯಿತು. ಇವತ್ತು ವಿಧಾನಸಭೆ ನಡೆಯುವಾಗ ಚುನಾವಣೆಯನ್ನು ಮುಂದುಹಾಕಿದ್ದೇವೆಂದು ರಾಜ್ಯ ಚುನಾವಣಾ ಕಮೀಶನರ್ ಹೇಳುತ್ತಾರೆ.....

(ಗದ್ದಲ)

ಅಧ್ಯಕ್ಷರು: ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ನಾನು ಮಾನ್ಯ ಸದಸ್ಯರಲ್ಲಿ ಬಹಳ ಕಳಕಳಿಯಿಂದ ವಿನಂತಿ ಮಾಡುತ್ತೇನೆ.

(ಗದ್ದಲ)

ಶ್ರೀ ವಾಟಾಳ್ ನಾಗರಾಜ್: ಪಂಚಾಯತಿ ರಾಜ್ ಸಚಿವರು ಚುನಾವಣೆ ಮುಂದೂಡಿದರೆ ರಾಜೀನಾಮೆ ಕೊಡುತ್ತೇನೆಂದು ಹೇಳಿದ್ದರು, ಅವರು ರಾಜೀನಾಮೆ ಕೊಟ್ಟಿದ್ದಾರೆಯೇ? ಅವರ ರಾಜೀನಾಮೆ ಬಂದಿದೆಯೇ?

ಅಧ್ಯಕ್ಷರು: ಆಯಿತು, ಕುಳಿತುಕೊಳ್ಳಿ, ನಾನು ಎದ್ದ ಮೇಲೆ ನೀವೆಲ್ಲ ಕುಳಿತುಕೊಳ್ಳಬೇಕು. ಅದು ನನ್ನ ಗಮನಕ್ಕೆ ಬಂದಿಲ್ಲ, ಅದನ್ನು ಪರಿಶೀಲನೆ ಮಾಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ: ಅವರು ರಾಜೀನಾಮೆ ಕೊಡಬೇಕಾದ ಅಗತ್ಯವಿಲ್ಲ.

(ಗೊಂದಲ)

ಅಧ್ಯಕ್ಷರು: ನಾನು ಮಾತನಾಡಿದ ನಂತರ ತಮಗೆಲ್ಲಾ ಮಾತನಾಡಲು ಮಾತನಾಡಲು ಅವಕಾಶ ಮಾಡಿಕೊಡುತ್ತೇನೆ. ಈಗ ಕಳೆದೆರಡು ದಿವಸಗಳಿಂದ ಸದನದಲ್ಲಿ ಈ ಪ್ರಸ್ತಾವನೆ ನಡೀತಾ ಇದೆ. ಪುನಃ ನಾನು ವಿರೋಧಪಕ್ಷದ ನಾಯಕರು ಮತ್ತು ಸದಸ್ಯರನ್ನು ಬಹಳ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ, ತಾವು ತಮ್ಮ ಸ್ಥಳಗಳಿಗೆ ಹೋಗಬೇಕು, ಕಾರ್ಯಕಲಾಪಗಳನ್ನು ನಡೆಸಲು ಅನುಕೂಲ ಮಾಡಿಕೊಡಬೇಕೆಂದು ಕೇಳುತ್ತೇನೆ. ಈ ವಿಷಯದಲ್ಲಿ ಮುಖ್ಯಮಂತ್ರಿಗಳೂ ಸ್ವಲ್ಪ ಹೇಳಲಿ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ: ಸಭೆ ನಡೆಸಲು ಅವಕಾಶ ಕೊಡದೇ ಇರುವ ತಾವು ಪ್ರಜಾಪ್ರಭುತ್ವದ ಪಾಠ ಈ ದೇಶಕ್ಕೆ ಹೇಳಿಕೊಡಬೇಕಾದ ಅಗತ್ಯ ಇಲ್ಲ. ಆದ್ದರಿಂದ ದಯಮಾಡಿ ಪ್ರಜಾಪ್ರಭುತ್ವದ ಪದ್ಧತಿ ಪ್ರಕಾರ ಸದನ ನಡೆಸಿ ಕೊಡುವುದನ್ನು ಮೊದಲು ಕಲಿತುಕೊಳ್ಳಿ. ಆಮೇಲೆ ಪ್ರಜಾಪ್ರಭುತ್ವದ ವಿಷಯ ಮಾತನಾಡಿ.

(ಗೊಂದಲ)

(ಈ ಹಂತದಲ್ಲಿ ವೆಲ್ನಲ್ಲಿದ್ದ ವಿರೋಧ ಪಕ್ಷದ ಸದಸ್ಯರು ಪ್ರಜಾಪ್ರಭುತ್ವ ವಿರೋಧಿ ಸರಕಾರಕ್ಕೆ ಮತ್ತೆ ನ್ಯಾಯಾಂಗ ತನಿಖೆ ಮಾಡದೇ ಇರುವ ಸರಕಾರಕ್ಕೆ ಧಿಕ್ಕಾರವೆಂದು ಘೋಷಣೆ ಕೂಗಿದರು.)

ಪ್ರಸ್ತಾವ

ಅಧ್ಯಕ್ಷರು: ಮಾನ್ಯ ಸದಸ್ಯರುಗಳು ತಮ್ಮ ಸ್ಥಾನಗಳಿಗೆ ಹೋಗಬೇಕೆಂದು ವಿನಂತಿಸಿಕೊಂಡಿದ್ದೆನು. ಆದರೆ ಅವರುಗಳು ನನ್ನ ಮನವಿಗೆ ಪುರಸ್ಕಾರ ಕೊಡದೇ ನನ್ನ ಅಧಿಕಾರದ ವಿಷಯದಲ್ಲಿ ಲಕ್ಷ್ಯವಿಲ್ಲದೆ ತಿರಸ್ಕಾರ ಮಾಡುತ್ತಾ ಸದನದ ಕಾರ್ಯಕಲಾಪಗಳಿಗೆ ಒಂದೇ ಸಮನಾಗಿ ಮತ್ತು ಉದ್ದೇಶಪೂರ್ವಕವಾಗಿ ಅಡಚಣೆಯನ್ನುಂಟು ಮಾಡುತ್ತಿದ್ದಾರೆ. ಆದುದರಿಂದ ನಾನು ನಿಯಮ 33ರ ಮೇರೆಗೆ ಈ ಕೆಳಕಂಡ ಸದಸ್ಯರು ಸಭೆಯ ಕಾರ್ಯ ಕಲಾಪಗಳಿಗೆ ಸತತವಾಗಿ ಅಡ್ಡಿಪಡಿಸಿದುದಕ್ಕಾಗಿ ಈ ಸಭೆಯ ಕಾರ್ಯಕಲಾಪಗಳಲ್ಲಿ ಭಾಗವಹಿಸುವುದನ್ನು ನಿಷೇಧಿಸಲಾಗಿದೆ. ನಾನು ಈ ಕೆಳಕಂಡ ಮಾನ್ಯ ಸದಸ್ಯರನ್ನು ಹೆಸರಿಸುತ್ತೇನೆ.

ಶ್ರೀಯುತರುಗಳಾದ:

1) ಆರ್.ವಿ. ದೇಶಪಾಂಡೆ
2) ಪಿ.ಜಿ.ಆರ್. ಸಿಂಧ್ಯ
3) ಡಿ.ಬಿ. ಚಂದ್ರೇಗೌಡ